# <u>2ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.1431/2010
ಸಿಡಬ್ಲ್ಯೂ.9 ಪಿಡಬ್ಲ್ಯೂ 4

| | | |
|---|---|---|
| ಸಾಕ್ಷಿಯ ಹೆಸರು | - | ಸದಾಶಿವಯ್ಯಾ ಮಲ್ಲಯ್ಯಾ ಮಠಪತಿ |
| ವಯಸ್ಸು | - | 67 ವರ್ಷ |
| ಉದ್ಯೋಗ | - | ನಿವೃತ್ತ ಎ.ಎಸ್.ಆಯ. |
| ವಾಸ | - | ಶಿವಾಪೂರ ತಾಃ ಗೋಕಾಕ |

ಕಲಂ 299 ಸಿ.ಆರ.ಪಿ.ಸಿ ರಡಿ ವಿಚಾರಣೆ
ದಿನಾಂಕಃ 11-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

ನಾನು 2009 ರಿಂದ 2013 ರವರೆಗೆ ಗೋಕಾಕ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಹೆಚ್.ಸಿ. ಅಂತಾ ಕಾರ್ಯನಿರ್ವಹಿಸಿರುತ್ತೇನೆ.

ದಿಃ 21-08-2010 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಾಯಂಕಾಲ 6-30 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಫಿರ್ಯಾದಿ ನೀಡಿದ್ದು, ಗುನ್ನಾ ಸಂಃ 193/2010 ಇದ್ದಕ್ಕೆ ಕಲಂ 498-ಎ 323, 504, 506 ದಾಖಲ ಮಾಡಿಕೊಂಡೆನು. ಮೂಲ ಫಿರ್ಯಾದಿ ಮತ್ತು FIR ನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ಅದೇ ದಿನ ಮುಂದಿನ ತನಿಖೆಯನ್ನು ಚಾಸಾ-10 ರವರಿಗೆ ವಹಿಸಿರುತ್ತೇನೆ.

ನಿಪ-1 ರ ಮೇಲೆ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ಇಲ್ಲಾ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

Sd/-
2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ